1990–91 1998 ಲೀಟರ್
1991–92 16527 "

(ಡಿಸೆಂಬರ್ 92ರವರೆಗೆ)

ಇ) 1989–90 198
1990–91 138
1991–92 273

(ಡಿಸೆಂಬರ್ 92ರವರೆಗೆ)

ಈ)

	89–90	90–91	91–92
1. ಶಿಕ್ಷೆಗೊಳಗಾದ ಮೊಕದ್ದಮೆಗಳ ಸಂಖ್ಯೆ	–	1	–
2. ಖುಲಾಸೆಯಾದ ಮೊಕದ್ದಮೆಗಳ ಸಂಖ್ಯೆ	170	110	168
3. ಉಳಿಕೆ ಇರುವ ಮೊಕದ್ದಮೆಗಳು	28	27	105

ಉ) ಅಬಕಾರಿ ಉಪ ಕಮೀಷನರ್ (ಜಾರಿ ಮತ್ತು ತನಿಖೆ) ಮಂಗಳೂರು ವಿಭಾಗ ಇವರ ನೇತೃತ್ವದಲ್ಲಿ ದಾಳಿ ದಳವನ್ನು ಸೃಷ್ಟಿಸಲಾಯಿತು. ಈ ದಳವು ಹಾಲಿ ಇರುವ ನಿಯತ ಅಬಕಾರಿ ಸಿಬ್ಬಂದಿಯಲ್ಲದೆ ಹೆಚ್ಚುವರಿ ದಳವಾಗಿರುತ್ತದೆ. ಕಳ್ಳಭಟ್ಟಿ ದಂಧೆಯನ್ನು ನಿರ್ಮೂಲನ ಮಾಡುವ ಸಲುವಾಗಿ ಆಗಿಂದಾಗ್ಗೆ ದಾಳಿ, ರಾತ್ರಿ ಗಸ್ತು, ರಸ್ತೆ ಗಸ್ತು ಮುಂತಾದುವುಗಳನ್ನು ನಡೆಸಲಾಗುತ್ತಿದೆ.

ಅಬಕಾರಿ ಇಲಾಖೆಯ ಆದಾಯ ಕುರಿತು

270 (71) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. 1990–91, 1991–92ನೇ ಡಿಸೆಂಬರ್ ಆಖೈರುವರೆಗೆ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು;

2. ಹಿಂದಿನ ವರ್ಷಗಳಿಗಿಂತ ಈ ವರ್ಷದಲ್ಲಿ ಆದಾಯ ಹೆಚ್ಚಾಗಿದೆಯೆ; (ವಿವರ ನೀಡುವುದು);

3. ಮುಂದಿನ ವರ್ಷಗಳಲ್ಲಿ ಅಬಕಾರಿ ಆದಾಯವನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1. ವರ್ಷ	ಆದಾಯ (ಕೋಟಿ ರೂ.ಗಳಲ್ಲಿ)
1990–91 (ಏಪ್ರಿಲ್ – ಡಿಸೆಂಬರ್)	311.01
1991–92 (ಏಪ್ರಿಲ್ – ಡಿಸೆಂಬರ್)	358.96

2. ಹೌದು ವಿವರಗಳು ಈ ಕೆಳಕಂಡಂತಿದೆ.

ವರ್ಷ (ಏಪ್ರಿಲ್ – ಡಿಸೆಂಬರ್)	ಆದಾಯ (ಕೋಟಿ ರೂ.ಗಳಲ್ಲಿ)	ಶೇಕಡಾವಾರು
1990–91	311.01	–
1991–92	358.96	15.42
1992–93	360–94	0.55

3. ಅ. ಹರಾಜು ಕ್ರಮವನ್ನು ವ್ಯವಸ್ಥಿತಗೊಳಿಸುವುದರ ಮೂಲಕ ಸಾರಾಯಿ ಕಿಸ್ತಿನಿಂದ ಹೆಚ್ಚು ರಾಜಸ್ವವನ್ನು ನಿರೀಕ್ಷಿಸಲಾಗಿದೆ.

ಆ) ಇಲಾಖೆಯ ಜಾರಿ ವಿಭಾಗವನ್ನು ಬಲಪಡಿಸುವುದರ ಮೂಲಕ ಹಾಗೂ ಕಳ್ಳಭಟ್ಟಿ ಕೇಂದ್ರಗಳ ಮೇಲೆ ಪರಿಣಾಮಕಾರಿಯಾಗಿ ಧಾಳಿ ಮಾಡುವುದರ ಮೂಲಕ ಸಾರಾಯಿ ಮತ್ತು ವಿದೇಶಿ ಮಧ್ಯದ ಮಾರಾಟದಲ್ಲಿನ ಸೋರುವಿಕೆಯನ್ನು ತಡೆಗಟ್ಟಿ, ರಾಜಸ್ವದಲ್ಲಿ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ನೇಸರಿಗಿ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್‌ದಲ್ಲಿಯ ಮೂತ್ರಾಲಯ ಮತ್ತು ಕಕ್ಕಸುಗಳ ಆಧುನೀಕರಣ.

226 (848) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ನೇಸರಗಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್‌ದಲ್ಲಿಯ ಮೂತ್ರಾಲಯ ಮತ್ತು ಕಕ್ಕಸುಗಳು ಬಹಳ ವರ್ಷಗಳ ಹಿಂದೆ ಕಟ್ಟಿಸಿದ್ದು ಅವುಗಳನ್ನು ನವೀಕರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಆ) ಈ ಸ್ಥಳಗಳಲ್ಲಿರುವ ಮೂತ್ರಾಲಯ ಮತ್ತು ಕಕ್ಕಸುಗಳನ್ನು ದುರಸ್ಥಿಗೊಳಿಸದೆ ಇರುವುದರಿಂದ ಪ್ರಯಾಣಿಕರಿಗೆ ಮೂತ್ರಾಲಯ ಮತ್ತು ಕಕ್ಕಸುಗಳನ್ನು ಉಪಯೋಗ ಮಾಡಲು ತೊಂದರೆಯಾಗುತ್ತಿರುವುದು ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯುಂಟಾಗುತ್ತಿರುವುದರಿಂದ ಇವುಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ಹಾಗಿದ್ದಲ್ಲಿ ದುರಸ್ತಿಗೊಳಿಸುವುದು ಯಾವಾಗ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಹೌದು

ಇ) ಬೈಲಹೊಂಗಲ ಮತ್ತು ನೇಸರಗಿ ಬಸ್ ಸ್ಟ್ಯಾಂಡ್‌ಗಳಲ್ಲಿ ಮೂತ್ರಾಲಯ ಮತ್ತು ಕಕ್ಕಸುಗಳನ್ನು ನವೀಕರಣ ಮಾಡಲು ಆದ್ಯತೆಯ ಮೇಲೆ ಈಗಾಗಲೇ ಸೂಕ್ತ ಕ್ರಮವನ್ನು ಜರುಗಿಸಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ

227 (850) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

-ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?